**ದಿನಾಂಕಃ 27-03-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**<u>ಪಾಟೀ ಸವಾಲು ಃ ಶ್ರೀ ಪಿ.ಎಮ್.ಎನ್. ವಕೀಲರಿಂದಃ</u>**

ರಸ್ತೆ ಚತುಷ್ಪತ ರಸ್ತೆ ಎಂದರೆ ಸರಿ. ಆ ರೀತಿ ಚತುಷ್ಪತ ರಸ್ತೆಯಲ್ಲಿ ಒಂದು ಲೇನ ದ್ವಿಚಕ್ರವಾಹನಗಳು ಓಡಾಡಲು ಇರುತ್ತದೆ ಎಂದರೆ ಸರಿ. ದ್ವಿಚಕ್ರವಾಹನಗಳು ಓಡಾಡುವ ಲೇನ ನಲ್ಲಿ ಅಪಘಾತವಾಗಿಲ್ಲ ಎಂದರೆ ಸರಿ. ಸದರಿ ಅಪಘಾತ ರಸ್ತೆಯ ಮದ್ಯದಲ್ಲಿ ಆಗಿದೆ ಎಂದರೆ ಸರಿ. ರಸ್ತೆ ಮದ್ಯದಲ್ಲಿ ಡಿವೈಡರ್ ಇದೆ ಎಂದರೆ ಸರಿ. ನಾನೇ ಜೋರಾಗಿ ವಾಹನವನ್ನು ಚಲಾಯಿಸಿಕೊಂಡು ಹೋಗಿ ರೋಡ್ ಡಿವೈಡರ್ ಗೆ ಹೊಡೆದು ಬಸ್ಸಿನ ಕೆಳಗೆ ಬಿದ್ದಿದ್ದೇನೆ ಎಂದರೆ ಸರಿಯಲ್ಲ.

2. ಕೆಲಸ ಇದ್ದಾಗ ಮಾತ್ರ ಗೌಂಡಿ ಕೆಲಸ ಮಾಡುತ್ತೇನೆ. ದಿನ ನಿತ್ಯ ಗೌಂಡಿ ಕೆಲಸ ಮಾಡುವುದಿಲ್ಲ ಎಂದರೆ ಸರಿ. ನಾನು ಗೌಂಡಿ ಕೆಲಸ ಮಾಡುತ್ತಿದ್ದ ಬಗ್ಗೆ ಕಟ್ಟಡ ಕಾರ್ಮಿಕರ ಸಂಘದಿಂದ ದಾಖಲಾತಿಯನ್ನು ಪಡೆದು ಹಾಜರುಪಡಿಸಿಲ್ಲ ಎಂದರೆ ಸರಿ. ಅಪಘಾತ ನನ್ನ ತಪ್ಪಿನಿಂದ ಆಗಿದೆ ಬಸ್ಸನ ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎಲ್.ಎ.ಡಿ. ವಕೀಲರಿಂದಃ**

ನಾನು 6 ನೇ ತರಗತಿಯವರೆಗೆ ಶಾಲೆ ಕಲಿತಿರುತ್ತೇನೆ. ನನಗೆ ಓದಲು ಬರೆಯಲು ಬರುವುದಿಲ್ಲ. ಈ ಪ್ರಕರಣದಲ್ಲಿ ಯಾವ ದಾಖಲಾತಿಗಳನ್ನು ಹಾಕಿದ್ದೇನೆ ಎಂದು ನನಗೆ ತಿಳಿದಿದೆ. ಈ ಪ್ರಕರಣದಲ್ಲಿ ನಾನು ಹಾಜರುಪಡಿಸಿದ ದಾಖಲೆಗಳು ಸರಿ ಇದ್ದಾವೆ. ನಾನು ಹಾಜರುಪಡಿಸಿದ ಗಾಯದ ಪ್ರಮಾಣ ಪತ್ರ ಸರಿ ಇದೆ. ಸದರಿ ಗಾಯದ ಪ್ರಮಾಣ ಪತ್ರದಲ್ಲಿ ನನ್ನ ಹೆಸರು, ವಯಸ್ಸು ಮತ್ತು ಯಾವ ಸ್ವರೂಪದ ಗಾಯಗಳು ಆಗಿವೆ ಎಂದು ಹೇಳಿರುವುದು ಸರಿ ಇದೆ. ನನ್ನ ವಯಸ್ಸಿಗೆ ಸಂಬಂದಿಸಿದಂತೆ ಯಾವುದೇ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಅಪಘಾತವಾದಾಗ ನನಗೆ 18 ವರ್ಷ ಆಗಿರುವುದಿಲ್ಲ 15 ವರ್ಷ ಆಗಿತ್ತು ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ನನಗೆ 20 ವರ್ಷ ವಯಸ್ಸು ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ವಾಹನ ಚಲಾಯಿಸಲು ಡಿಎಲ್ ಇರುವುದಿಲ್ಲ. ಆಗ ನನಗೆ 15 ವರ್ಷ ವಯಸ್ಸು ಆಗಿದ್ದು ವಾಹನ ಚಲಾಯಿಸಲು ನಿಗದಿತ ವಯಸ್ಸು ಆಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಚಲಾಯಿಸುತ್ತಿದ್ದ ದ್ವಿಚಕ್ರ ವಾಹನ ನಮ್ಮ ಮಾವ ಪಾಂಡಪ್ಪನಿಗೆ ಸೇರಿರುತ್ತದೆ.

3. ನಾನು ಚಲಾಯಿಸುತ್ತಿದ್ದ ವಾಹನಕ್ಕೆ ವಿಮೆ, ಆರ್.ಸಿ. ಇತ್ತು. ಸದರಿ ವಾಹನಕ್ಕೆ ವಿಮೆ ಇಲ್ಲದ ಕಾರಣ ಪರಿಹಾರದ ಸಲುವಾಗಿ ಕೆ.ಎಸ್ ಆರ್ ಟಿ ಸಿ ಬಸ್ಸನ ಮೇಲೆ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಚಲಾಯಿಸುತ್ತಿದ್ದ ದ್ವಿಚಕ್ರ ವಾಹನದ ಸಂಖ್ಯೆ ಕೆಎ 37 ಇಎ 0536 ಆಗಿರುತ್ತದೆ. ಅಪಘಾತ ರಾಷ್ಟ್ರಿಯ ಹೆದ್ದಾರಿಯಲ್ಲಿ ಆಗಿರುತ್ತದೆ ಎಂದರೆ ಸರಿ. ಸದರಿ ಹೈವೆ ಉತ್ತರ ದಕ್ಷಿಣಾಬಿಮುಖವಾಗಿದೆ. ನಮ್ಮ ಊರು ಹೈವೆಯಿಂದ ಪಶ್ಚಿಮ ದಿಕ್ಕಿಗೆ ಇದೆ ಎಂದರೆ ಸರಿ. ನಾನು ನಮ್ಮ ಊರಿನಿಂದ ಹೈವೆಗೆ ಹೋಗುತ್ತಿದ್ದೆ ಎಂದರೆ ಸರಿ. ನಾನು ಹೊಸಪೇಟೆ ರಸ್ತೆ ಕಡೆ ಹೋಗುತ್ತಿದ್ದೆ ಎಂದರೆ ಸರಿ. ಆ ರೀತಿ ನಾನು ಹೊಸಪೇಟೆ ರಸ್ತೆಗೆ ಹೋಗಬೇಕಾದರೆ ಪೂರ್ವ ದಿಕ್ಕಿನ ರಸ್ತೆಗೆ ಹೋಗಬೇಕಾಗಿತ್ತು ಎಂದರೆ ಸರಿ. ನನ್ನ ಊರು ಕೆಂಚನದೊಣಿ ತಾಂಡಾ. ನನ್ನ ಊರಿನಿಂದ ಹೊಸಪೇಟೆ ಕಡೆ ಹೋಗುತ್ತಿದ್ದೆ. ಸದರಿ ರಸ್ತೆಯನ್ನು ದಾಟುವಾಗ ಕುಷ್ಟಗಿ ಕಡೆಯಿಂದ ಬರುವ ವಾಹನಗಳನ್ನು ಗಮನಿಸದೇ ಹೋಗಿ ಅಪಘಾತ ಪಡಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ.

4. ಅಪಘಾತವಾದ ತಕ್ಷಣ ನಾನು ಕೊಪ್ಪಳ ಜಿಲ್ಲಾಸ್ಪತ್ರೆಗೆ ಹೋಗಿದ್ದೆ. ಕೊಪ್ಪಳ ಜಿಲ್ಲಾಸ್ಪತ್ರೆಯಲ್ಲಿ ಒಂದು ದಿನ ಒಳರೋಗಿಯಾಗಿದ್ದೆ. ಮಾರನೇ ದಿನ ನಾನು ಬೆಳಗಾಂವ ಆಸ್ಪತ್ರೆಗೆ ಹೋಗಿದ್ದೆ ಸದರಿ ಆಸ್ಪತ್ರೆ ಹೆಸರು ಗೊತ್ತಿಲ್ಲ. ಈ ಪ್ರಕರಣದಲ್ಲಿ ಬೆಳಗಾಂವ ಆಸ್ಪತ್ರೆಯ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಅದೇ ದಿನ ಬೆಳಗಾಂವ ಆಸ್ಪತ್ರೆಯವರು ಕಿಮ್ಸ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ನಾನು ಸರಿಯಾಗಿ ಚಿಕಿತ್ಸೆ ಪಡೆಯದ ಕಾರಣ ನನ್ನ ತಪ್ಪಿನಿಂದ ಕಾಲನ್ನು ಕತ್ತರಿಸಬೇಕಾಯಿತು ಎಂದರೆ ಸರಿಯಲ್ಲ. ನಾನು ಚಿಕಿತ್ಸೆ ಪಡೆದ ಬಗ್ಗೆ ಯಾವುದೇ ವೈದ್ಯಕೀಯ ಬಿಲ್ಲುಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ 8 ನ್ನು ಅಂಗನ್ಯೂನತೆ ಪ್ರಮಾಣ ಪತ್ರವನ್ನು ವೈದ್ಯರೊಂದಿಗೆ ಶಾಮಿಲಾಗಿ ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಂಗನ್ಯೂನತೆ ಪ್ರಮಾಣ ಪತ್ರವನ್ನು ನನ್ನ ಒಂದು ಕಾಲಿಗೆ ಕೊಟ್ಟಿದ್ದಾರೆ ಎಂದರೆ ಸರಿ. ನಾನು 2 ಲಕ್ಷ 50 ಸಾವಿರ ಹಣವನ್ನು ವೈದ್ಯಕೀಯ ವೆಚ್ಚ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಾನು ಗೌಂಡಿ ಕೆಲಸ ಮಾಡುತ್ತಿದ್ದೆ ಹಾಗೂ ಅದರಿಂದ ತಿಂಗಳಿಗೆ 15 ಸಾವಿರ ದುಡಿಯುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಲೇಬರ್ ಕಾರ್ಡನ್ನು ಗೌಂಡಿ ಕೆಲಸ

ಮಾಡುತ್ತಿದ್ದ ಬಗ್ಗೆ ಹಾಜರುಪಡಿಸಿಲ್ಲ. ನಾನು ಈಗಲೂ ಕುಳಿತುಕೊಂಡು ಮಾಡುವಂತಹ ಯಾವುದಾದರೂ ಕೆಲಸ ಮಾಡಬಹುದು ಎಂದರೆ ಸರಿಯಲ್ಲ. ನನಗೆ ಯಾವುದೇ ಕೆಲಸ ಮಾಡಲು ಆಗುವುದಿಲ್ಲ ಹಾಗೂ ದುಡಿಯಲು ಆಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಈ ಅಪಘಾತವಾಗಿರುವುದರಿಂದ ಕೆಎಸ್ ಆರ್ ಟಿ ಸಿಯವರು ಪರಿಹಾರ ಕೊಡಲು ಭಾದ್ಯರಲ್ಲ ಎಂದರೆ ಸರಿಯಲ್ಲ. ವೈದ್ಯಕೀಯ ಬಿಲ್ಲುಗಳಿಗೆ ಯಾವುದೇ ಶೀಲುಗಳು ಮತ್ತು ಸಹಿ ಇಲ್ಲದ ಕಾರಣ ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ವಾಹನ ಚಲಾಯಿಸಲು ನನಗೆ ಕಡಿಮೆ ವಯಸ್ಸು ಆಗಿದ್ದರಿಂದ ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.
ಸಹಿ/-
**ಹಿರಿಯ ವ್ಯವಹಾರ ನ್ಯಾಯಾಧೀಶರು,**
**ಕೊಪ್ಪಳ.**